





ಎದುರಿನ ಬೆಟ್ಟದ ಮೇಲಿರುವ ಶಿವನ ದೇವಸ್ಥಾನವನ್ನು ದೂರದರ್ಶಕದ ಮೂಲಕ ನೋಡುವ ವ್ಯವಸ್ಥೆಯೂ ಇಲ್ಲಿದೆ.

1857ರಲ್ಲಿ ಮೊದಲ ಬಾರಿಗೆ ಈ ಗಿರಿಧಾಮವನ್ನು ಕ್ಯಾಪ್ಟನ್ ಜೇಮ್ಸ್ ಫೋರ್ಸೆತ್ ಎಂಬ ಬ್ರಿಟಿಷ್ ಅಧಿಕಾರಿ ಕಂಡುಹಿಡಿದ. ಇಲ್ಲಿಯ ರಮಣೀಯ ಸೌಂದರ್ಯವನ್ನು ನೋಡಿ ಆನಂದಿಸಿದ ಆತ ಇಲ್ಲೇ ಬ್ರಿಟಿಷರ ದಂಡುಪ್ರದೇಶವನ್ನು ಸ್ಥಾಪಿಸಿದ. ಈ ಸ್ಥಳಕ್ಕೆ ಫೋರ್ಸೆತ್ ಎಂದೂ ಹೆಸರಿದೆ. 1964ರಲ್ಲಿ ಇಂದಿರಾ ಗಾಂಧಿಯವರು ಇಲ್ಲಿಗೆ ಭೇಟಿ ಕೊಟ್ಟ ನಂತರ ಈ ಪ್ರದೇಶವನ್ನು 'ಪ್ರಿಯದರ್ಶಿನಿ ಪಾಯಿಂಟ್' ಎಂದೂ ಕರೆಯುತ್ತಾರೆ.

ಎದುರಿಗೇ ಚೌರಾಘರ್ ಎನ್ನುವ ಬೆಟ್ಟವಿದೆ. ಬೆಟ್ಟಶ್ರೇಣಿಯಲ್ಲಿ ಎರಡನೇ ಅತಿ ಎತ್ತರದ ಬೆಟ್ಟವಿದು. ಶಿವನ ದೇವಸ್ಥಾನ ಇಲ್ಲೂ ಕಾಣಿಸುತ್ತದೆ. ಇದಕ್ಕೊಂದು ಸ್ಥಳ ಪುರಾಣವಿದೆ. ಅದರ ಪ್ರಕಾರ, ಭಸ್ಮಾಸುರನೆಂಬ ರಾಕ್ಷಸ ಈ ಬೆಟ್ಟದ ಮೇಲೆ ಚಂಡಿಯನ್ನು ಕುರಿತು ತಪಸ್ಸು ಮಾಡಿದ. ಶಿವನು ತನ್ನ ತ್ರಿಶೂಲವನ್ನು ಭಸ್ಮಾಸುರನತ್ತ ಎಸೆದ. ಆದರೆ ಭಸ್ಮಾಸುರ ತಪ್ಪಿಸಿಕೊಂಡ.

ಇಲ್ಲಿಗೆ ಬರುವ ಭಕ್ತರು ಆ ಪುರಾಣದ ನೆನಪಿನಲ್ಲೇ ತ್ರಿಶೂಲಗಳನ್ನು ನೆಡುತ್ತಾರೆ. ಸನ್ಯಾಸಿಯೊಬ್ಬ ವಂತಿಗೆ ಹಣದಿಂದ ಈ ದೇವಸ್ಥಾನವನ್ನು ಕಟ್ಟಿಸಿದನಂತೆ. ಈ ದೇವಸ್ಥಾನದಲ್ಲಿ ಬಿಳಿ ಅಮೃತಶಿಲೆಯ ಶಿವನ ಎತ್ತರವಾದ ವಿಗ್ರಹ ಮತ್ತು ಕರಿ ಅಮೃತಶಿಲೆಯ ಲಿಂಗವಿದೆ. ಸುಮಾರು 1200 ಮೆಟ್ಟಿಲುಗಳನ್ನು ಹತ್ತಿ ಮೇಲೆ ಬರಬೇಕು. ದೇವಾಲಯವನ್ನು ಚೌರಾಗಾರ್ ಎಂದು ಕರೆಯುತ್ತಾರೆ.

ಈ ಶಿವನ ದೇವಸ್ಥಾನವು ಗುಹೆಯ ಒಳಗಿದೆ. ಈ ಗುಹೆಯೊಳಕ್ಕೆ 40 ಅಡಿ ಉದ್ದದ ಅತ್ಯಂತ ಕಿರಿದಾದ ಹಾದಿಯಲ್ಲಿ ಹೋಗಬೇಕು. ಒಂದು ಸಲಕ್ಕೆ 8 ಜನರನ್ನು ಮಾತ್ರ ಒಳಗೆ ಬಿಡುತ್ತಾರೆ. ಒಳಗೆ ಗಣೇಶ ವಿಗ್ರಹ ಮತ್ತು ಶಿವಲಿಂಗವಿದೆ. ಗುಹೆಯ ಹೊರಗೆ ಪ್ರವೇಶದ್ವಾರದಲ್ಲಿ ಕೆಂಪು ಕಲ್ಲಿನ ಸಂಜೀವಿನಿ ಪರ್ವತವನ್ನು ಎತ್ತಿ ನಿಂತಿರುವ ಹನುಮಂತನ ಬೃಹತ್ ವಿಗ್ರಹವಿದೆ.

ಬಡಾ ಮಹದೇವ ದೇವಸ್ಥಾನವೂ ಗವಿಯ ಒಳಗಿದೆ. ಗವಿಯ ಮುಂಭಾಗದಲ್ಲೇ ಹಲವು ದೇವತಾ ಮೂರ್ತಿಗಳಿವೆ. ದೇವಸ್ಥಾನದ ಪಕ್ಕದಲ್ಲಿರುವ ಇನ್ನೊಂದು ಗುಹೆಯಲ್ಲಿ ಜುಳುಜುಳು ನೀರು ಹರಿಯುತ್ತಿರುತ್ತದೆ. ಪಕ್ಕದಲ್ಲಿ ಜಟಾಶಂಕರ ದೇವಸ್ಥಾನವೂ ಇದೆ.